
ಅವನ ಅಭಿಪ್ರಾಯ ಸುಳ್ಳಾಯಿತು.

ಮೂತ್ರ ವಿಸರ್ಜನೆ ಮುಗಿದೊಡನೆಯೇ ಮಲಬಾಧೆಯೂ ಒತ್ತರಿಸಿಕೊಂಡು ಗುದದ್ವಾರದ ಬಾಗಿಲ ಬಳಿಯೇ ಬಂದು ಬಿಟ್ಟಿತು. ಇನ್ನು ತಡೆಯುವುದು ಸಾಧ್ಯವಿಲ್ಲವೆನಿಸಿತು. ತಡೆಯಲು ಯತ್ನಿಸಿದರೆ ಗುದದ್ವಾರ ಸಿಡಿದು ಗುಡ್ಲಿನ ತುಂಬಾ ಮಲ ಸಿಂಪಡಣೆಯಾಗುವುದು ಖಾತ್ರಿಯೆನಿಸಿತು.

ಯಾವುದಾದರೂ ಮಡಿಕೆಯೊಳಗೆ ಮಾಡಿಟ್ಟರೆ ಬೆಳಗ್ಗೆ ಎದ್ದು ಚೆಲ್ಲಬಹುದು ಎಂದುಕೊಳ್ಳುತ್ತಾ ಗುಡ್ಲಿನ ಮೂಲೆಯಲ್ಲಿ ತಡಕಾಡಿದ.



ಅತಿ ಸಣ್ಣ ಬಾಯಿಯ ಚಪ್ಪಟೆಯಾಗಿ ಆಮೆಯಾಕಾರದ, ಸೇಂದಿ ತುಂಬುವ ‘ತತ್ರಾಣೆ’ ಕೈಗೆ ತಾಗಿತು. ಅದನ್ನು ಪಕ್ಕಕ್ಕೆ ಸರಿಸಿ ಗಂಜಿಯ ಮಡಕೆಗೆ ಕೈ ಹಾಕಿದ. ಅದರಲ್ಲಿ ರಾತ್ರಿ ಉಳಿಸಿದ್ದ ಗಂಜಿ ಹಾಗೂ ಇನ್ನೊಂದು ಮಡಕೆಯಲ್ಲಿ ಏಡಿ ಸಾರು ಹಾಗೆಯೇ ಇತ್ತು. ಅನ್ನದೊಳಕ್ಕೆ ಹೇಗೆ ಹೇಲುವುದು ಎಂದುಕೊಳ್ಳುತ್ತಾ ಪಕ್ಕಕ್ಕೆ ಕೈ ಹಾಕಿದ. ಅಗಲ ಬಾಯಿನ ದೊಡ್ಡ ಮಡಿಕೆ: ಗೌಡರ ಮನೆಗೆ ಸೇಂದಿ ತುಂಬಿಸಿಕೊಡುವುದು.

ಅವನಿಗೆ ಮತ್ತೆ ಯೋಚಿಸಲು ಸಮಯ ಉಳಿಯಲಿಲ್ಲ. ಚಡ್ಡಿ ಉದುರಿಸಿ ಬಾಗಿ ನಿಂತ.

ಢಂ...

ಬನದಲ್ಲಿ ಗುಂಡಿನ ಸದ್ದಾಯಿತು.

ಸೇಂದಿಯ ಹುಳಿ, ಹಲಸಿನ ಸಿಹಿ ಹಾಗೂ ಗಂಜಿಯ ಸೌಮ್ಯ ವಾಸನೆ ಮೂರೂ ಮಿಳಿತವಾಗಿ ಗುಡಿಸಲಿನ ತುಂಬಾ ವಿಶೇಷವಾದ ಪರಿಮಳವೊಂದು ಹರಡಿಕೊಂಡಿತು. ಗುಡಿಸಲಿನ ಹೊರಗೆ ಮಲಗಿದ್ದ ಟೈಗರ್ ಕುಯ್‌ಗುಡತೊಡಗಿತು.

ದುಮ್ಮ ಗುಡ್ಲಿನ ಬಾಗಿಲು ತೆಗೆದೊಡನೆಯೇ ಟೈಗರ್ ಮಾಮೂಲಿನಂತೆ ತಗ್ಗಿನ ಹಳ್ಳದ ಕಡೆಗೆ ಓಡು ನಡಿಗೆಯಲ್ಲಿ ನಡೆಯತೊಡಗಿತು.

ದಿನವೂ ಕೋಳಿ ಕೂಗಿದ ಕೂಡಲೇ ಎದ್ದು ಅರ್ಧ ಮೈಲಿ ದೂರದ ಹಳ್ಳದೆಡೆಗೆ ಸಾಗಿ, ನಿತ್ಯ ಕರ್ಮಗಳನ್ನೆಲ್ಲಾ ಮುಗಿಸಿ ಐದೂವರೆಯ ವೇಳೆಗೆ ಹಿಂದಿರುಗುತ್ತಿದ್ದ. ಆಗ ಬೈನೆ ಕುಯ್ದು ಸೇಂದಿ ಬಸಿಯುವ ಸಮಯ ಆಗಿರುತ್ತಿತ್ತು...

‘ಆಗಲೇ ತಡವಾಗಿದೆ. ಹೊತ್ತು ತಪ್ಪಿ ಬೈನೆ ಕುಯ್ದು ಸೇಂದಿ ಇಳಿಯುವುದು ನಿಂತುಹೋದರೂ ಹೋಗಬಹುದು’ ಎಂದುಕೊಳ್ಳುತ್ತಾ ಮಡಿಕೆಯ ಉಗ್ಗವನ್ನು ಕೈಯಲ್ಲಿ ಹಿಡಿದು ಕಾಡಿನ ಏರು ದಾರಿಯಲ್ಲಿ ಅವಸರದ ಹೆಜ್ಜೆ ಹಾಕತೊಡಗಿದ. ಹಳ್ಳದ ಕಡೆಯಿಂದ ಹಿಂತಿರುಗಿ ಓಡಿ ಬಂದ ಟೈಗರ್ ಅವನನ್ನು ಹಿಂಬಾಲಿಸತೊಡಗಿತು.

ಬೈನೆ ಬುಡದಲ್ಲಿ ಮಡಿಕೆಯಿಟ್ಟು ‘ಬಂದು ಮಲವನ್ನೆಲ್ಲಾ ಚೆಲ್ಲಿ ಎಲೆಯಲ್ಲಿ ವರೆಸಿದರಾಯಿತು’ ಎಂದುಕೊಳ್ಳುತ್ತಾ ಕಾಡೊಳಗೆ ನುಗ್ಗಿ ಮಾಮೂಲಿ ಜಾಗದಲ್ಲಿಟ್ಟಿದ್ದ ಕೈಹಗ್ಗ ಕಾಲುಹಗ್ಗ ತೆಗೆದುಕೊಂಡು, ಸೊಂಟಕ್ಕೆ ವಡ್ಯಾಣ ಕಟ್ಟಿಕೊಳ್ಳುತ್ತಾ ಹೊರಬಂದ.

ನಾಯಿ ಮಡಿಕೆಯೊಳಗೆ ಬಾಯಿ ಹಾಕಿತ್ತು. ಚಪಚಪನೆ ಸದ್ದು ಕೇಳಿಸುತ್ತಿತ್ತು. ಅವನು ಸಮೀಪಿಸುವಷ್ಟರಲ್ಲಿ ತಿಂದು ಮುಗಿಸಿ ಮಡಿಕೆ ನೆಕ್ಕುತ್ತಿತ್ತು.

ಮಡಿಕೆಯ ಉಗ್ಗವನ್ನು ಸೊಂಟದ ವಡ್ಯಾಣದ ಕೊಕ್ಕೆಗೆ ಸಿಕ್ಕಿಸಿಕೊಂಡು ಕಾಲು ಹಗ್ಗ ಕೈ ಹಗ್ಗ ಧರಿಸಿ ಸರಸರನೆ ಬೈನೆ ಏರಿದ. ಬೈನೆಗೆ ಕಟ್ಟಿದ ಮಡಿಕೆ ತುಂಬಿತ್ತು.

ಅದರಿಂದ ಸೇಂದಿಯನ್ನು ಗೌಡರ ಸೇಂದಿಯ ಮಡಿಕೆಗೆ ಬಗ್ಗಿಸಿಕೊಂಡ. ತಳದಲ್ಲಿ ಒಂದು ಲೀಟರಿನಷ್ಟು ಗಟ್ಟಿಯಾದ ಮಡ್ಡಿ ನಿಂತಿತ್ತು. ಮಡಿಕೆಯನ್ನು ಸ್ವಚ್ಛಗೊಳಿಸಿ ಒಂದು ತಿಂಗಳಾಗಿದ್ದರಿಂದ ಮಡ್ಡಿ ಗಟ್ಟಿಯಾಗಿ ತಳದಲ್ಲಿ ಹೆಟ್ಟಗಟ್ಟಿತ್ತು. ಕೈ ಹಾಕಿ ಮಡ್ಡಿಯನ್ನೆಲ್ಲಾ ಕಲಕಿದ. ತಳದ ‘ಹೆಟ್ಟ’ವನ್ನೆಲ್ಲಾ ಕೆರೆದು ತೆಗೆದು, ಎಲ್ಲವನ್ನು ಗೌಡರ ಮಡಿಕೆಗೆ ಬಸಿದ.

‘ಎಲ್ಲವೂ ಬೆರೆತುಹೋಯಿತು. ಈಗ ಸೇಂದಿ ಬಹಳ ಗಡುಸಾಗಿರುತ್ತದೆ. ನಂತರೆಲ್ಲಾ ಸೇರಿ ಚೆನ್ನಾಗಿ ಕುಡಿಯಲಿ... ನನಗಂತೂ ಈವತ್ತು ಸೇಂದಿಯಿಲ್ಲ... ನಾಳೆ ಬೆಳಗ್ಗೆಯ ಹೊತ್ತಿಗೆ ಸ್ವಚ್ಛಮಡಿಕೆಯಲ್ಲಿ ಪರಿಶುದ್ಧ ನೀರಾ ತಯಾರಾಗಿರುತ್ತದೆ. ಕುಡಿದರಾಯಿತು. ಈಗ ಗುಡಿಸಲಿಗೆ ಹೋಗಿ ಏಡಿ ಚಟ್ನಿ ನಂಚಿಕೊಂಡು ತಂಗಳು ಗಂಜಿ ಕುಡಿದು ಮಾಮೂಲಿನಂತೆ ತೋಟದ ಕೆಲಸಕ್ಕೆ ಹೋಗೋಣ’ ಎಂದುಕೊಳ್ಳುತ್ತಾ ಸರಸರನೆ ಜಾರುತ್ತಾ ಬೈನೆ ಇಳಿಯತೊಡಗಿದ. ಬುಡದಲ್ಲಿ ಟೈಗರ್ ಅವನ ಜೊತೆಗಾಗಿ ಕಾಯುತ್ತಾ ಕುಳಿತಿತ್ತು.

●